**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಿರುಗುಪ್ಪ**

**ಸಿಸಿ. 437/2018**

**ಫಿರ್ಯಾದುದಾರರು:** : ಶ್ರೀ ವೀರಭದ್ರಪ್ಪ

ವಿರುದ್ಧ

**ಆರೋಪಿ** : ಎಂ.ಎಸ್.ಬೆಳ್ಳುಬ್ಬಿ

**ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿ ಆರೋಪಿಯ ಹೇಳಿಕೆ:-**

**ಪ್ರಶ್ನೆ: 1** : ಇದುವರೆಗೂ ಫಿರ್ಯಾದುದಾರರ ಪರ ಸಾಕ್ಷಿ ವಿಚಾರಣೆಯನ್ನು ಆಲಿಸಿದ್ದೀರಾ?

**ಉತ್ತರ:**

**ಪ್ರಶ್ನೆ: 2:** ಪ್ರಾಸಾ-1/ಶ್ರೀ ವೀರಭದ್ರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿಮಗೆ ಸೇರಿದ Kolhar Canes Ltd., Angadageri, Basavana Bagewadi Tq, Bijapur ಕಂಪನಿಯಲ್ಲಿ ತಿಂಗಳಿಗೆ ರೂ.1,15,000/- ಸಂಬಳ ಕೊಡುತ್ತೇವೆಂದು ಸದರಿಯವರಿಗೆ ನೀವು ಮೇಲೆ ಹೇಳಿದ ಕಂಪನಿಯಲ್ಲಿ ದಿನಾಂಕ 21.04.2017 ರಂದು ನೇಮಕ ಮಾಡಿಕೊಂಡು ಅವರು ಸದರಿ ಕಂಪನಿಯಲ್ಲಿ ಸುಮಾರು 10 ತಿಂಗಳು ಕೆಲಸ ಮಾಡಿದರು ಕೂಡ ಅವರಿಗೆ ಒಟ್ಟು ರೂ.10,17,866/- ಸಂಬಳವನ್ನು ನೀಡದೆ ಇದ್ದು, ನಿಮ್ಮನ್ನು ವಿಚಾರಿಸಿದಾಗ ನೀವು ನಿಮಗೆ ಸೇರಿದ ಕೆನರಾ ಬ್ಯಾಂಕ್ ಬಸವನ ಬಾಗೇವಾಡಿ ತೆಲಗಿ ಶಾಖೆಗೆ ಸೇರಿದ ದಿನಾಂಕ 05-01-2018 ಚೆಕ್ ನಂ.798213 ರೂ.9,96,000/- ಗಳಿಗೆ ಚೆಕ್ಕನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರ:**

**ಪ್ರಶ್ನೆಃ 3ಃ** ಪ್ರಾಸಾ-1 ರವರು ಮುಂದುವರೆದು ಸದರಿಯವರು ನಿಮ್ಮ ಆಶ್ವಾಸನೆಯಂತೆ ಚೆಕ್ ನಗದೀಕರಣಕ್ಕಾಗಿ ಕೆನರಾ ಬ್ಯಾಂಕ್, ಸಿರುಗುಪ್ಪ ಶಾಖೆಯಲ್ಲಿರುವ ತನ್ನ ಖಾತೆಯ ಮೂಲಕ ಚೆಕ್ಕನ್ನು ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣ ಇಲ್ಲ" ಎಂಬ ಹಿಂಬರಹ ದೊಂದಿಗೆ ಚೆಕ್ಕು ವಾಪಸ್ಸಾಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆಃ 4ಃ** ಪ್ರಾಸಾ-1 ರವರು ಮುಂದುವರೆದು ನಂತರ ಸದರಿ ವಿಚಾರದಲ್ಲಿ ತಾನು ಆರೋಪಿಯಾದ ನಿಮಗೆ ದಿಃ 05.02.2016 ರಂದು ನೋಂದಾಯಿತ ಅಂಚೆ ಮೂಲಕ ನೊಟೀಸ್ ಕಳುಹಿಸಿದ್ದು, ಅದು ನಿಮಗೆ ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ಸದರಿ ನೋಟೀಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

ಪ್ರಶ್ನೆಃ **5)ಃ** ಈ ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

**ಪ್ರಶ್ನೆಃ 6 ಃ** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಉತ್ತರಃ**

ದಿನಾಂಕ 08.06.2023 ರಂದು ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿತನು ತಮ್ಮ ಸ್ವ ಇಚ್ಛೆಯಿಂದ ಕೊಟ್ಟ ಹೇಳಿಕೆಗಳಾಗಿತ್ತವೆ ಅಂತ ನಾನು ದೃಢಪಡಿಸುತ್ತೇನೆ.

**(ಹಾಜಿಹುಸೇನಸಾಬ ಯಾದವಾಡ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,** ಸಿರುಗುಪ್ಪ.